# ಬುನಾದಿ ಹಂತದ ಕಲಿಕೆಯ ಕೇಂದ್ರಬಿಂದು: ಆಟ

ಕಿನ್ನರಿ ಪಾಂಡ್ಯ

ಮಗುವಿನ ಮೊದಲ ಐದು ವರ್ಷಗಳ ಶಾಲಾ ಕಲಿಕೆಯಲ್ಲಿ ಭಾರತದ ಶಾಲಾ ವ್ಯವಸ್ಥೆಯು ಸಾಧಿಸಲು ಶ್ರಮಿಸಬೇಕಿರುವ ಧ್ಯೇಯಗಳು, ಬೋಧನಶೈಲಿಯ ಕಲ್ಪನೆಗಳು ಹಾಗೂ ಕಲಿಕಾ-ಮಾನದಂಡಗಳು ಹೇಗಿರಬೇಕು ಎಂಬುದಕ್ಕೆ ವ್ಯಾಪಕ ಮಾರ್ಗದರ್ಶಿ ಸೂತ್ರಗಳನ್ನು ಕೊಡಮಾಡುವ ದಾಖಲೆಯಾದ ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF-FS) 2022 ಈ ದೆಸೆಯಲ್ಲಿ ಒಂದು ಮೈಲಿಗಲ್ಲು ಎನ್ನಬಹುದು. ಮಕ್ಕಳು ಹೇಗೆ ಕಲಿಯುತ್ತಾರೆ, ಆಟದ ಪ್ರಾಮುಖ್ಯ, ಆಟದ ಮೂಲಕ ಕಲಿಕೆ ಹಾಗೂ ಮೂರರಿಂದ ಎಂಟು ವರ್ಷದ ಮಕ್ಕಳ ಕಲಿಕಾ-ಧ್ಯೇಯಗಳು ಮತ್ತು ಮಾನದಂಡಗಳು, ಆಟದೊಂದಿಗೆ ಹೊಂದಿರುವ ಸಂಬಂಧಗಳ ವಿಷಯವಾಗಿ ಪ್ರಸ್ತುತ ಲೇಖನವು ಗಮನವನ್ನು ಕೇಂದ್ರೀಕರಿಸುತ್ತದೆ. ಈ ಪಾರ್ಶ್ವಗಳನ್ನು ಕುರಿತ ರೂಪುರೇಖೆಗಳನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಭಾಗ 1, 2 ಮತ್ತು 4ರಲ್ಲಿ ನೀಡಲಾಗಿದೆ.

## ಚಿಕ್ಕ ಮಕ್ಕಳು ಮತ್ತು ಕಲಿಕೆ

ಸಚಿತ್ರ ವಿವರಣೆ1: ಮೂರು ವರ್ಷದ ಮಗುವೊಂದು ತರಗತಿಯ ಗೋಡೆಯ ಅಂಚಿನಲ್ಲಿ ಸಾಲಾಗಿ ಸಾಗುತ್ತಿರುವ ಇರುವೆಗಳನ್ನು ಗಮನಿಸುತ್ತಿದೆ. ಅವುಗಳಲ್ಲಿ ದೊಡ್ಡ ಇರುವೆಯೊಂದು ಪುಟ್ಟ ಇರುವೆಯೊಂದನ್ನು ಹೊತ್ತು, ಇತರ ಇರುವೆಗಳನ್ನು ಅನುಸರಿಸುತ್ತಾ ಸಾಗುವುದನ್ನು ಈ ಮಗುವು ಸೂಕ್ಷ್ಮವಾಗಿ ಗಮನಿಸುತ್ತಿದೆ. ಐದು ವರ್ಷದ ಮಗುವೊಂದು ಪುಟ್ಟ ಪಾರದರ್ಶಕ ಡಬ್ಬವೊಂದನ್ನು ತಂದು ಅದರಲ್ಲಿ ಇರುವೆಗಳನ್ನು ಹಿಡಿದು ತುಂಬಿ, ಇರುವೆಗಳನ್ನು ಕಾಪಾಡಿಕೊಂಡು, ಅವುಗಳ ಚಲನವಲನಗಳನ್ನು ಗಮನಿಸಲು ಅದರ ಮುಚ್ಚಳವನ್ನು ಒಡನೆಯೇ ಹಾಕಿ ಭದ್ರಮಾಡುತ್ತದೆ.

ಸಚಿತ್ರ ವಿವರಣೆ 2: ಒಂದನೇ ತರಗತಿಯ ಶಿಕ್ಷಕರು ಕ್ರಮಬದ್ಧವಾದ ರೀತಿಯಲ್ಲಿ ಕಥೆಗಳನ್ನು ಹೇಳುವ ಅಭ್ಯಾಸವನ್ನು ಇರಿಸಿಕೊಂಡಿದ್ದಾರೆ. ಮಕ್ಕಳು ಆ ಶಿಕ್ಷಕರ ಹಾವಭಾವಗಳನ್ನು ಗಮನಿಸುತ್ತಾ, ಅವರು ಹೇಳುವುದನ್ನು ಗಮನವಿಟ್ಟು ಆಲಿಸುತ್ತಾರೆ. ಅದು ಸಿಂಹದ ಗರ್ಜನೆ, ಇಲಿಯ ಚೀರಾಟ ಅಥವಾ ಹಾವು ಹತ್ತಿರವಾಗುವುದನ್ನು ಕಂಡ ಅಳಿಲಿನ ಶಬ್ದವಾಗಿರಬಹುದು. ದಿನವೂ ವಾಡಿಕೆಯಾಗಿ ನಿಗದಿಯಾದ ಕಥಾಕಾಲಕ್ಷೇಪದ ಸಮಯದಲ್ಲಿ ಹಲವು ಮಕ್ಕಳು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದನ್ನು ಜೋಡಿಗಳಲ್ಲಿ ಒಬ್ಬರಿಗೊಬ್ಬರು ಗಟ್ಟಿಯಾಗಿ ಓದುತ್ತಾರೆ. ಕೆಲವು ಮಕ್ಕಳು ಬಿಡುವಿದ್ದಾಗ ಪ್ರಾಣಿಗಳ ಗೊಂಬೆಗಳನ್ನು ಇಟ್ಟುಕೊಂಡು ಕಥೆಯೊಂದರ ಅಭಿನಯಕ್ಕೆ ತೊಡಗುತ್ತಾರೆ.

ಮೇಲಿನ ಸಚಿತ್ರ ವಿವರಣೆಗಳ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ನಾವು ಊಹಿಸಬಹುದು.

ಈ ಸಚಿತ್ರ ವಿವರಣೆಗಳು ಚಿಕ್ಕ ಮಕ್ಕಳನ್ನು ಕುರಿತು ಏನನ್ನು ಸೂಚಿಸುತ್ತವೆ?

- ಮಕ್ಕಳು ಕುತೂಹಲಿಗಳು
- ಮಕ್ಕಳು ಪ್ರಕೃತಿ ಮತ್ತು ತಮ್ಮ ಪರಿಸರದೊಂದಿಗೆ ಒಡನಾಡುತ್ತಾರೆ
- ಮಕ್ಕಳು ಗಮನವಿಟ್ಟು ನೋಡುತ್ತಾರೆ
- ಅನ್ವೇಷಿಸುವುದೆಂದರೆ ಮಕ್ಕಳಿಗೆ ಇಷ್ಟ
- ಮಕ್ಕಳು ಅನುಕರಿಸುತ್ತಾರೆ
- ಮಕ್ಕಳು ಅಭಿವ್ಯಕ್ತಿಸುತ್ತಾರೆ

ಇವು ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದನ್ನು ಕುರಿತು ಏನನ್ನು ಹೇಳುತ್ತದೆ?

- ಮಕ್ಕಳು ಗಮನವಿಟ್ಟು ನೋಡಿ, ಪರಿಸರದಿಂದ ಕಲಿಯುತ್ತಾರೆ.
- ಮಕ್ಕಳು ಕಲಿಯಲು ತಮ್ಮ ಸುತ್ತಲಿನ ಸಾಮಗ್ರಿ, ಜನ, ಭಾವನೆಗಳು ಹಾಗೂ ವಸ್ತುಗಳೊಂದಿಗೆ ಒಡನಾಡುತ್ತಾರೆ.
- ಮಕ್ಕಳು ತಮ್ಮ ಸುತ್ತಮುತ್ತಲಿನ ಜಗತ್ತನ್ನು ಅರ್ಥಮಾಡಿ-ಕೊಳ್ಳಲು ಅನ್ವೇಷಿಸುವುದು, ಪರೀಕ್ಷಿಸುವುದು ಹಾಗೂ ಕುಶಲತೆಯಿಂದ ನಿರ್ವಹಿಸುವುದನ್ನು ಕೈಗೊಳ್ಳುತ್ತಾರೆ.

ಇದನ್ನು ನಾವು ವಿನೋದದ ಕಲಿಕೆ ಎಂದು ಕರೆಯುತ್ತೇವೆಯೇ?

ಇರುವೆಗಳು ಸಾಲಾಗಿ ಸಾಗುವುದನ್ನು ಪ್ರೇಕ್ಷಕನಾಗಿ ಗಮನಿಸುವ ಮಗು ಹರುಷ ಮತ್ತು ಅಚ್ಚರಿಗಳನ್ನು ಅನುಭವಿಸುತ್ತದೆ. ಅದೊಂದು ಮೋಜಿನ ಅನುಭವವಾಗಿದ್ದು, ಮಗು ತನ್ಮಯತೆ-ಯಿಂದ ಆಟ ಹಾಗೂ ವಿನೋದದ ಅನುಭವವೊಂದರಲ್ಲಿ ಮಗ್ನವಾಗಿದೆಯೆಂದು ಬಹುಶಃ ಇದನ್ನು ಸ್ಥೂಲವಾಗಿ ವರ್ಗೀಕರಿಸಬಹುದೇನೋ.

ಸಚಿತ್ರ ವಿವರಣೆ 2ರಲ್ಲಿ ಕಥೆಯನ್ನು ಪುನಃ ಹೇಳುವ ಕ್ರಿಯೆ, ಬಿಡುವಿನಲ್ಲಿ ಓದುವುದು, ಪರಸ್ಪರ ಕಥಾಲಾಪ, ಕಥೆಯಲ್ಲಿ ಬರುವ ಪಾತ್ರಗಳ ಚಿತ್ರ ಬಿಡಿಸುವುದು ಮತ್ತು ಅಭಿನಯಿಸುವುದು, ಈ ಎಲ್ಲ ಸಕ್ರಿಯಾತ್ಮಕ ಕಲಿಕಾ-ಅನುಭವಗಳು ಸಹ ಸ್ವಭಾವತಃ

ವಿನೋದವಾಗಿ ತೋರುತ್ತದೆ. ಮಕ್ಕಳು ಇದನ್ನು ಮಾಡುವುದರಲ್ಲಿ ಮೋಜನ್ನು ಅನುಭವಿಸುವುದಷ್ಟೇ ಅಲ್ಲದೆ, ಇದು ಅವರ ಆಯ್ಕೆಯಾಗಿರುತ್ತದೆ.

ಮೇಲಿನ ಎರಡೂ ಸಚಿತ್ರ ವಿವರಣೆಗಳಲ್ಲಿ ಆಡುವುದು ಹಾಗೂ ಕಲಿಯುವುದು ಎರಡು ಭಿನ್ನ ಸಂಗತಿಗಳಾಗಿ ತೋರುವುದಿಲ್ಲ. ಅವೆರಡೂ ಯಾವುದೇ ಎಗ್ಗಿಲ್ಲದೆ ಮಕ್ಕಳು ಅನುಭವಿಸುವ ರೀತಿಯಲ್ಲಿ ಒಟ್ಟಾಗಿ ಸಾಗುತ್ತವೆ.

## ಬುನಾದಿ ಹಂತದಲ್ಲಿ ಬೋಧನೆ-ಕಲಿಕೆ

ನಾವೀಗ ಕೆಳಗಿನ ಎರಡು ಸನ್ನಿವೇಶಗಳನ್ನು ಗಮನಿಸೋಣ.

ಸನ್ನಿವೇಶ A : ತರಗತಿಯ 25 ಮಕ್ಕಳು ಸಣ್ಣ–ಸಣ್ಣ ಗುಂಪುಗಳಲ್ಲಿ ಕೊಠಡಿಯ ಬೇರೆ–ಬೇರೆ ಭಾಗಗಳಲ್ಲಿ ಕಾರ್ಯನಿರತರಾಗಿದ್ದಾರೆ. ಒಂದು ಗುಂಪು ಕಥೆಗಳನ್ನು ಓದುತ್ತಿದ್ದರೆ, ಮತ್ತೊಂದು ಗುಂಪು ಬ್ಲಾಕ್ಸ್, ಮಣಿ ಹಾಗೂ ಕೈಚಳಕ ಬಳಕೆಗಳೊಂದಿಗೆ ಆಡುತ್ತಿದ್ದಾರೆ: ಮೂರನೇ ಗುಂಪು ಉದ್ದನೆಯ ಕಪ್ಪುಹಲಗೆಯ ಮೇಲೆ ಏನನ್ನೋ ಗೀಚುತ್ತಿದೆ ಹಾಗೂ ನಾಲ್ಕನೆಯ ಗುಂಪು ಡಾಕ್ಟರ್–ಡಾಕ್ಟರ್ ಆಟವಾಡುತ್ತಿದ್ದಾರೆ. ಶಿಕ್ಷಕರು ಒಂದು ಗುಂಪಿನಿಂದ ಮತ್ತೊಂದು ಗುಂಪಿನೆಡೆಗೆ ಸಾಗುತ್ತಾ, ಓದುತ್ತಿರುವ ಗುಂಪಿಗೆ ನಿರ್ದಿಷ್ಟ ಕಥೆಯೊಂದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾ, ಮಣಿಗಳೊಡನೆ ಆಡುತ್ತಿರುವ ಗುಂಪಿನವರೊಂದಿಗೆ ಮಣಿಗಳ ವಿನ್ಯಾಸವನ್ನು ರಚಿಸುತ್ತಾ, ಉದ್ದನೆಯ ಕಪ್ಪುಹಲಗೆಯ ಮೇಲೆ ಮಕ್ಕಳು ಬಿಡಿಸಿರುವ ಚಿತ್ರಗಳಿಗೆ ಹೆಸರುಗಳನ್ನು ನೀಡುತ್ತಾ ಹಾಗೂ ಡಾಕ್ಟರ್–ಡಾಕ್ಟರ್ ಆಡುತ್ತಿರುವ ಮಕ್ಕಳ ಗುಂಪಿನಲ್ಲಿ ಔಷಧದ ಅಂಗಡಿಯವರಂತೆ ವರ್ತಿಸುತ್ತಾ ಇದ್ದಾರೆ.

ಸನ್ನಿವೇಶ B: ಮತ್ತೊಂದು ತರಗತಿಯ 25 ಮಕ್ಕಳು ನೋಟ್ ಪುಸ್ತಕ ಮತ್ತು ಸೀಸದ ಕಡ್ಡಿ ಹಿಡಿದು ಸಾಲಾಗಿ ಬೆಂಚುಗಳ ಮೇಲೆ ಕುಳಿತಿದ್ದಾರೆ. ಅವರು ತಮ್ಮ ಪುಸ್ತಕಗಳನ್ನು ಅಧ್ಯಯನಪರರಂತೆ ತೋರುತ್ತಾ, ಇಡೀ ತರಗತಿಯ ಅವಧಿಯ ಉದ್ದಕ್ಕೂ 1ರಿಂದ 100ರವರೆಗಿನ ಸಂಖ್ಯೆಗಳ ನಕಲು ತೆಗೆಯುತ್ತಾ ಇದ್ದಾರೆ. ಅಷ್ಟು ಹೊತ್ತೂ ಶಿಕ್ಷಕರು ತರಗತಿಯಲ್ಲಿ ಶತಪಥ ತಿರುಗುತ್ತಾ, ಯಾರೂ ಗದ್ದಲ ಮಾಡದಂತೆ ನೋಡಿಕೊಳ್ಳುತ್ತಿದ್ದಾರೆ. ಯಾವುದಾದರೂ ಮಗುವಿನ ಬರವಣಿಗೆ ಸ್ಪಷ್ಟವಿರದಿದ್ದರೆ ಅವರು ಅದನ್ನು ಅಳಿಸಿ, ಮಗುವಿಗೆ ಮತ್ತೊಮ್ಮೆ ಬರೆಯುವಂತೆ ಹೇಳುತ್ತಾರೆ. ಸದ್ದಿಲ್ಲದೇ ದಿನವೊಂದರಲ್ಲಿ ಕಪ್ಪುಹಲಗೆಯ ಮೇಲಿನದನ್ನು ಹಲವು ಬಾರಿ ನಕಲು ತೆಗೆಯುವುದೇ ಈ ತರಗತಿಯ ದಿನದ ಬಹುಭಾಗದ ವಾಡಿಕೆಯ ಕಲಾಪ. ಇದಕ್ಕೆ ಅಪವಾದವೆಂದರೆ, ಮಕ್ಕಳಿಗೆ ಲಭ್ಯವಿರುವ 15 ನಿಮಿಷಗಳ ಹಾಗೂ 30 ನಿಮಿಷಗಳ ವಿರಾಮ– ಆಗ ಮಕ್ಕಳು ಶಾಲೆಯ ಸುತ್ತ ಓಡಾಡಲು, ತಮಗೆ ಬೇಕಾದ್ದನ್ನು ಮಾಡಲು ಅನುಮತಿ ಇರುತ್ತದೆ.

ಎರಡೂ ಒಂದೇ ರೀತಿಯ ಸಾಮಾಜಿಕ–ಆರ್ಥಿಕ ಹಿನ್ನೆಲೆಗಳಿಂದ ಬಂದ ಐದರಿಂದ ಆರು ವಯಸ್ಸಿನ ಮಕ್ಕಳ ತರಗತಿಗಳು.

ಈ ಎರಡೂ ಸನ್ನಿವೇಶಗಳಿಗೆ ಸಾಮಾನ್ಯವಾದುದು ಏನು?

1. ಎರಡೂ ಕೊಠಡಿಯ ಒಳಗೆ ನಡೆಯುವ ಬೋಧನೆ–ಕಲಿಕೆಯ ಸನ್ನಿವೇಶಗಳು.
2. ಮಕ್ಕಳ ಕಲಿಕೆಯಲ್ಲಿ ಹಾಗೂ ಪಠ್ಯವಿಷಯವನ್ನು ಮುಗಿಸುವಲ್ಲಿ ಆಸಕ್ತಿ ವಹಿಸಿರುವ ಕಟಿಬದ್ಧ ಹಾಗೂ ಕಾಳಜಿಪರ ಶಿಕ್ಷಕರು ಎರಡೂ ಸನ್ನಿವೇಶಗಳಲ್ಲಿ ಇದ್ದಾರೆ.
3. ಎರಡೂ ತರಗತಿಗಳಲ್ಲಿ ಒಂದೇ ವಯೋಮಾನದ ಹಾಗೂ ಒಂದೇ ರೀತಿಯ ಬೆಳವಣಿಗೆಯ ಲಕ್ಷಣಗಳನ್ನು ತೋರುವ ಮಕ್ಕಳಿದ್ದಾರೆ.

ಎರಡೂ ಸನ್ನಿವೇಶಗಳಲ್ಲಿ ವಿಭಿನ್ನವಾಗಿರುವುದು ಏನು?

1. ಮಕ್ಕಳ ಪಾಲ್ಗೊಳ್ಳುವಿಕೆ, ಸ್ವಾತಂತ್ರ್ಯ ಹಾಗೂ ನಿಯಂತ್ರಣ:

   a. ಸನ್ನಿವೇಶ A ಯಲ್ಲಿ ತರಗತಿಯು ಪರಸ್ಪರ ಮಾತ–ನಾಡುತ್ತಿರುವ, ಆಟಿಕೆಗಳನ್ನು ಹಂಚಿಕೊಳ್ಳುತ್ತಿರುವ ವಿದ್ಯಾರ್ಥಿಗಳ ಚಲನವಲನಗಳಿಂದ ಉಂಟಾಗುವ ಗದ್ದಲದಿಂದ ತುಂಬಿದೆ.

   b. ಸನ್ನಿವೇಶ B ಯಲ್ಲಿ ತರಗತಿಯು ಸ್ಫುಟವಾದ ಶಿಸ್ತಿನ ಪ್ರಜ್ಞೆಯನ್ನು ಪ್ರದರ್ಶಿಸುತ್ತಾ, ಸದ್ದಿಲ್ಲದೆ ಕಾರ್ಯ–ನಿರತವಾಗಿದೆ.

2. ಆಯ್ಕೆ ಮತ್ತು ವಿದ್ಯಾರ್ಥಿಗಳ ಪಾತ್ರ:

   a. ಸನ್ನಿವೇಶ A ಯಲ್ಲಿ ಮಕ್ಕಳು ತರಗತಿಯಲ್ಲಿ ಓಡಾಡುತ್ತಾ, ಮಾತನಾಡುತ್ತಾ, ಹೊಸ ಸಂಗತಿಗಳನ್ನು ಪ್ರಯತ್ನಿಸುತ್ತಾ ಇದ್ದು, ಮಕ್ಕಳು ಏನನ್ನು ಮಾಡಲು ಆರಿಸಿಕೊಂಡಿದ್ದಾರೋ ಅದರಲ್ಲಿ ಶಿಕ್ಷಕರು ಪಾಲ್ಗೊಳ್ಳುತ್ತಿದ್ದಾರೆ. ಇಲ್ಲಿನ ಬೋಧನಶೈಲಿಯು ಸಕ್ರಿಯಾತ್ಮಕ ಅನ್ವೇಷಣೆಯಂತೆ ತೋರುತ್ತಿದೆ.

   b. ಸನ್ನಿವೇಶ B ಯಲ್ಲಿ ವಯಸ್ಕರೊಬ್ಬರು ಬೋಧಿಸುತ್ತಿದ್ದು, ಮಕ್ಕಳು ಕುಳಿತು ನಕಲು ತೆಗೆಯುವ, ಅಭ್ಯಾಸ ಮಾಡುವ ಹಾಗೂ ಶಿಕ್ಷಕರು ನಿಗದಿಪಡಿಸಿರುವ ಕೆಲಸಗಳನ್ನು ಮತ್ತೆ–ಮತ್ತೆ ಮಾಡುವ ಮೂಲಕ ಕಲಿಯುತ್ತಿದ್ದಾರೆ. ಸೂಚನೆಗಳನ್ನು ಅನುಸರಿಸುವುದು ಹಾಗೂ ಕೆಲಸವನ್ನು ಮಾಡಿ ಮುಗಿಸುವುದು ಇಲ್ಲಿನ ಮುಖ್ಯ ಉದ್ದೇಶಗಳಾಗಿ ತೋರುತ್ತವೆ.

3. ಒಡನಾಟ:

   a. ಸನ್ನಿವೇಶ A ಯಲ್ಲಿ ಒಡನಾಟವು ಉನ್ನತ ಮಟ್ಟದ್ದಾಗಿದೆ–ಮಕ್ಕಳ ನಡುವೆ ಒಡನಾಟ, ಶಿಕ್ಷಕರು ಮತ್ತು ಮಕ್ಕಳ ನಡುವೆ ಒಡನಾಟ ಹಾಗೂ ಮಕ್ಕಳು ಮತ್ತು ಪರಿಸರದ (ಆಟಿಕೆಗಳು, ಸಾಮಗ್ರಿಗಳು) ನಡುವೆ ಒಡನಾಟ. ಪರಿಸರವೇ ಮೂರನೇ ಶಿಕ್ಷಕರಂತೆ ಇಲ್ಲಿ ಪರಿಗಣಿಸಲ್ಪಟ್ಟಿದೆ.

b. ಸನ್ನಿವೇಶ B ಯಲ್ಲಿ ಮಕ್ಕಳ ನಡುವಿನ ಒಡನಾಟವು ಕನಿಷ್ಠ ಮಟ್ಟದಲ್ಲಿದ್ದು, ಎಲ್ಲೋ ಕೆಲವೊಮ್ಮೆ ಶಿಕ್ಷಕರು ಮತ್ತು ಮಕ್ಕಳ ನಡುವಿನ ಒಡನಾಟ ಹೆಚ್ಚಾಗಿ ಇರುವಂತೆ ತೋರಬಹುದು. ಮಕ್ಕಳು ಮತ್ತು ಆಟಿಕೆಗಳು, ಸಾಮಗ್ರಿಗಳ ನಡುವಿನ ಒಡನಾಟವು ಕೆಲವು ನಿರ್ದಿಷ್ಟ ಚಟುವಟಿಕೆಗಳಿಗೆ ಹಾಗೂ ಕೆಲಸವನ್ನು ಮಾಡಿಮುಗಿಸುವುದಕ್ಕಷ್ಟೇ ಸೀಮಿತವಾಗಿರಬಹುದು. ಉದಾಹರಣೆಗೆ, ಮೇಲಿನ ಉದಾಹರಣೆಯಲ್ಲಿ ಮಕ್ಕಳು ಅತಿಯಾಗಿ ಒಡನಾಡುವುದು ಬೆಂಚು, ನೋಟ್ ಪುಸ್ತಕ, ಲೇಖನಿ ಹಾಗೂ ಕಪ್ಪುಹಲಗೆಗಳೊಂದಿಗಷ್ಟೇ.

ಕೊನೆಯದಾಗಿ, ಸನ್ನಿವೇಶ A ಯಲ್ಲಿ ಬೆರಗು, ಹರುಷ ಹಾಗೂ ನಲಿದಾಟಗಳು ಇದ್ದಂತೆ ತೋರಿದರೆ, ಈ ಲಕ್ಷಣಗಳು ಸಂಪೂರ್ಣವಾಗಿ ಸನ್ನಿವೇಶ B ಯಲ್ಲಿ ಕಣ್ಮರೆಯಾಗಿವೆ.

ನಾವು ಸನ್ನಿವೇಶ Aಯು ಹೆಚ್ಚು ಸಕ್ರಿಯಾತ್ಮಕ ಕಲಿಕಾ–ಅವಕಾಶಗಳು ಹಾಗೂ, ತನ್ಮೂಲಕ, ಹೆಚ್ಚು ಸಮಗ್ರ ಬೆಳವಣಿಗೆಗೆ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ ಎಂದು ವರ್ಗೀಕರಿಸ–ಬಹುದೆ? ಕಲಿಕಾ–ವಾತಾವರಣದಲ್ಲಿ ವಿನೋದತೆಯು ನಿಷ್ಕ್ರಿಯಾತ್ಮಕ ತೊಡಗಿಸಿಕೊಳ್ಳುವಿಕೆ ಹಾಗೂ ನಕಲು ತೆಗೆಯುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಕಲಿಕೆಗೆ ಕೊಡಮಾಡಬಹುದು. ನಕಲು ತೆಗೆಯುವಂತಹ ಕೆಲಸಗಳು ಮಕ್ಕಳು ಮಾಡಿರುವ ಕೆಲಸದ ಪ್ರಮಾಣವನ್ನು ಪ್ರದರ್ಶಿಸ–ಬಹುದಾದರೂ, ಯಾವುದೇ ನಿಜ ಕಲಿಕೆಯಾಗಿ–ತಮ್ಮ ಸುತ್ತಲಿನ ಜಗತ್ತನ್ನು ಅರಿಯುವಂತೆ ಮಕ್ಕಳನ್ನು ಸಬಲಗೊಳಿಸುವ ಕಲಿಕೆಯಾಗಿ–ಪರಿಣಮಿಸದೇ ಹೋಗುತ್ತದೆ.

ಸನ್ನಿವೇಶ B ಯಲ್ಲಿಯ ಶಿಕ್ಷಕರು ಅದೇ ಕಲಿಕೆಯನ್ನು ಹರ್ಷಪೂರ್ಣ ಅನುಭವವಾಗಿ ಮಾಡಲು ಹೇಗೆ ಸಾಧ್ಯ ಎಂಬ ಪ್ರಶ್ನೆಯಂತೂ ಉಳಿಯುತ್ತದೆ.

ಬೋಧನಶೈಲಿಯಾಗಿ ಆಟ ಮತ್ತು ವಿನೋದತೆಗಳು ಆಟದ ಆಯ್ಕೆ, ನಲಿವು ಮತ್ತು ವಿಸ್ಮಯಗಳು ಆಟದ ವಿಶೇಷ ಗುಣಗಳಾಗಿರುತ್ತವೆ ಎಂದು ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸೂಚಿಸುತ್ತದೆ. ಬೆಳವಣಿಗೆಯ ಎಲ್ಲ ಕ್ಷೇತ್ರಗಳಲ್ಲೂ ಕಲಿಕೆಯಾಗುವುದನ್ನು ಖಾತ್ರಿಪಡಿಸಲು ಕಲಿಕಾ–ವಾತಾವರಣವು ವಿನೋದದಿಂದ ಕೂಡಿರುವುದು ಅವಶ್ಯಕ. ಆಡುವಾಗ ಮಕ್ಕಳು ಸಕ್ರಿಯರಾಗಿರುತ್ತಾರಲ್ಲದೆ, ಅವರು ತಮ್ಮ ಸುತ್ತಲಿನ ಜಗತ್ತನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಂಘಟನೆ, ಯೋಜನೆ, ಕಲ್ಪನೆ, ಕೌಶಲಪೂರ್ಣ ನಿರ್ವಹಣೆ, ಸಂಧಾನ, ಅನ್ವೇಷಣೆ, ಪರಿಶೀಲನೆ ಮತ್ತು ಸೃಜನಶೀಲತೆಗಳನ್ನು ಮೆರೆಯುತ್ತಾರೆ. (NCF-FS, ಪು. 38, 39)

ತಮ್ಮ ಸುತ್ತಮುತ್ತಲಿನ ಜಗತ್ತು ಹಾಗೂ ಜನರೊಂದಿಗಿನ ಒಡನಾಟದೊಂದಿಗೆ ಈ ಸಕ್ರಿಯಾತ್ಮಕ ಕಲಿಕೆಯು ಮಕ್ಕಳಿಗೆ ಸಮೃದ್ಧ ಸಂವೇದನಾತ್ಮಕ, ಬೌದ್ಧಿಕ, ಭಾಷಿಕ, ದೈಹಿಕ ಹಾಗೂ ಸ್ನಾಯುಚಲನಾತ್ಮಕ (motor) ಅನುಭವಗಳನ್ನು ನೀಡುತ್ತದೆ.

ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ಮುಂದುವರಿದು, ಈ ಹಂತದ ಕಲಿಕೆಯು ಮಕ್ಕಳು ಇತರ ಮಕ್ಕಳೊಡನೆ ಹಾಗೂ ಅಧಿಕ ಅನುಭವವಿರುವ ಇತರರೊಂದಿಗೆ ಆಟ ಮತ್ತು ಒಡನಾಟದ ಮೂಲಕ ಕಲಿಯುವ ಒಂದು ಸಕ್ರಿಯಾತ್ಮಕ ಹಾಗೂ ಪರಸ್ಪರ ಪ್ರತಿಕ್ರಿಯಿಸುವ ಪ್ರಕ್ರಿಯೆಯೆಂದು ಸೂಚಿಸುತ್ತದೆ. ಮಕ್ಕಳು ತಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅನುಭವಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಎಡೆಬಿಡದೆ ಹೊಂದಾಣಿಕೆಗೆ ಯತ್ನಿಸುತ್ತಾ, ತಮ್ಮ ಗ್ರಹಿಕೆಗಳು ಹಾಗೂ ಅನುಭವಗಳನ್ನು ಅರ್ಥೈಸಿಕೊಳ್ಳಲು ನೂತನ ಮಾಹಿತಿಯನ್ನು ಬಳಸುತ್ತಾರೆ. ಇತರರೊಡನೆ ಸಕ್ರಿಯವಾಗಿ ಪಾಲ್ಗೊಳ್ಳುವ ಅನುಭವಗಳ ಮೂಲಕ ಹಾಗೂ ಕಲಿಕೆ, ಕಲ್ಪನಾಶಕ್ತಿ, ಸೃಜನಶೀಲತೆ, ನೂತನಶೋಧ ಮತ್ತು ಸಮಸ್ಯಾ ಪರಿಹಾರಗಳನ್ನು ಪ್ರಚೋದಿಸಿ ವೃದ್ಧಿಪಡಿಸುವ ಸಹಜ, ನಿಜಜಗತ್ತಿನ ಸಾಮಗ್ರಿಗಳ ಮೂಲಕ ಮಕ್ಕಳ ಆಟ ಮತ್ತು ವಿನೋದತೆಗಳನ್ನು ವಿವಿಧ ಹಾಗೂ ಅನನ್ಯ ರೀತಿಗಳಲ್ಲಿ ಪೋಷಿಸಿ, ಬಲಪಡಿಸಬಹುದಾಗಿದೆ. (ಪು. 38)

ಆಟದ ಮಹತ್ತ್ವದ ಬಗ್ಗೆ ತಿಳಿಸಿಕೊಡುವ ದಾಖಲೆಯು, ಈ ಭಾಗದಲ್ಲಿ, ಹಲವು ವಿಧಗಳ ಆಟಗಳನ್ನು ಕುರಿತ ರೂಪುರೇಖೆಗಳನ್ನು ಹಾಗೂ ಹೇಗೆ ನಿಯಂತ್ರಣ ಮತ್ತು ಸಂರಚನೆಗಳು ಮುಕ್ತ ಆಟದಿಂದ, ಮಾರ್ಗದರ್ಶಿತ ಆಟ ಮತ್ತು ರಚನಾತ್ಮಕ ಆಟಕ್ಕೆ, ನಿಯಮಾಧಾರಿತ ಆಟ ಮತ್ತು ಕ್ರೀಡೆಗಳಿಗೆ ಬದಲಾಗುತ್ತವೆ ಎಂಬುದರ ಇನ್ನಷ್ಟು ರೂಪುರೇಖೆಗಳನ್ನು ನೀಡುತ್ತದೆ. ಮುಂದುವರಿದು, ಆಟವು ಪೋಷಿಸುವ ಮುಖ್ಯ ವಿಕಾಸಾತ್ಮಕ ಲಕ್ಷಣಗಳನ್ನು ಆಧರಿಸಿ ಈ ದಾಖಲೆಯು ಆಟದ ವಿಧಗಳ ಉದಾಹರಣೆಗಳನ್ನು ಸಾದರಪಡಿಸುತ್ತದೆ (ಕೋಷ್ಟಕ 1 ಮತ್ತು 2).

ಕೋಷ್ಟಕ 1. ಸಂರಚನೆ ಮತ್ತು ನಿಯಂತ್ರಣಗಳನ್ನು ಆಧರಿಸಿದ ಆಟದ ವಿಧಗಳು.

| | ಮುಕ್ತ ಆಟ | ಮಾರ್ಗದರ್ಶಿತ ಆಟ | ಸಂರಚಿತ ಆಟ |
|---|---|---|---|
| ಪಾತ್ರಗಳು | ಮಕ್ಕಳಿಂದ ಮುನ್ನಡೆಸಲ್ಪಡುವ ಮಕ್ಕಳಿಂದ ನಿರ್ದೇಶಿಲ್ಪಡುವ | ಮಕ್ಕಳಿಂದ ಮುನ್ನಡೆಸಲ್ಪಡುವ ಶಿಕ್ಷಕರಿಂದ ಬೆಂಬಲಿಸಲ್ಪಡುವ | ಶಿಕ್ಷಕರಿಂದ ಮುನ್ನಡೆಸಲ್ಪಡುವ ಮಕ್ಕಳು ಸಕ್ರಿಯವಾಗಿ ಪಾಲ್ಗೊಳ್ಳುವ |
| ಮಕ್ಕಳು ಏನು ಮಾಡುತ್ತಾರೆ? | ಮಕ್ಕಳು ತಮ್ಮ ಆಟದ ಎಲ್ಲ ಅಂಶಗಳನ್ನೂ ನಿರ್ಧರಿಸುತ್ತಾರೆ – ಏನನ್ನು ಆಡಬೇಕು, ಹೇಗೆ ಆಡಬೇಕು, ಎಷ್ಟು ಹೊತ್ತು ಆಡಬೇಕು, ಯಾರೊಂದಿಗೆ ಆಡಬೇಕು. | ಮಕ್ಕಳು ಮುಕ್ತ ಆಟದ ಸಮಯದಲ್ಲಿ ಮಾಡುವಂತೆಯೇ ತಮ್ಮದೇ ಆದ ಆಟವನ್ನು ಆಯೋಜಿಸಿ, ಮುನ್ನಡೆಸುತ್ತಾರೆ. | ಮಕ್ಕಳು ಸಕ್ರಿಯವಾಗಿ ಆಲಿಸಿ, ನಿಯಮಗಳನ್ನು ಪಾಲಿಸಿ, ಶಿಕ್ಷಕರು ಆಯೋಜಿಸಿದ ಚಟುವಟಿಕೆ ಹಾಗೂ ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಾರೆ. |
| ಶಿಕ್ಷಕರು ಏನು ಮಾಡುತ್ತಾರೆ? | ತರಗತಿಯಲ್ಲಿ ಶಿಕ್ಷಕರು ಉತ್ತೇಜನಕಾರಿ ಆಟದ ವಾತಾವರಣವನ್ನು ರೂಪಿಸುತ್ತಾರೆ, ಮಕ್ಕಳನ್ನು ಗಮನಿಸುತ್ತಾರೆ, ಮಕ್ಕಳು ಬೆಂಬಲ ಬೇಡಿದಾಗ ನೆರವಾಗುತ್ತಾರೆ. | ಶಿಕ್ಷಕರು ಬೆಂಬಲ ನೀಡುವುದರ ಜೊತೆಗೆ, ಸಕ್ರಿಯವಾಗಿ ಆಟವನ್ನು ಸುಗಮಗೊಳಿಸುತ್ತಾರೆ. ಶಿಕ್ಷಕರು ಮಕ್ಕಳನ್ನು ಹಲವು ಕಾರ್ಯಗಳಲ್ಲಿ ತೊಡಗಿಸಿ, ಅವರಿಗೆ ಮಾರ್ಗದರ್ಶನ ನೀಡುತ್ತಾರೆ, ಪ್ರಶ್ನೆಗಳನ್ನು ಕೇಳುತ್ತಾರೆ, ನಿರ್ದಿಷ್ಟ ಕಲಿಕಾ–ಉದ್ದೇಶಗಳನ್ನು ಈಡೇರಿಸಲು ಮಕ್ಕಳೊಂದಿಗೆ ಆಡುತ್ತಾರೆ. | ಶಿಕ್ಷಕರು ಕಲಿಕಾ–ಸರಣಿಯಲ್ಲಿ ಯೋಗ್ಯತೆಗಳನ್ನು ಉತ್ತೇಜಿಸಲು ನಿರ್ದಿಷ್ಟ ನಿಯಮಗಳುಳ್ಳ ಚಟುವಟಿಕೆ ಹಾಗೂ ಕ್ರೀಡೆಗಳನ್ನು ಎಚ್ಚರಿಕೆಯಿಂದ ಆಯೋಜಿಸುತ್ತಾರೆ. ಭಾಷೆ ಹಾಗೂ ಗಣಿತಕ್ಕೆ ಸಂಬಂಧಿಸಿದ ಆಟಗಳು, ಪರಿಸರ ನಡಿಗೆಗಳು, ಹಾಡು ಹಾಗೂ ಪ್ರಾಸಬದ್ಧ ರಚನೆಗಳನ್ನು ದಿನನಿತ್ಯವೂ ಆಯೋಜಿಸುತ್ತಾರೆ. |

ಮೂಲ: ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 1.4.2. ಆಟದ ಮೂಲಕ ಕಲಿಕೆ. ಕೋಷ್ಟಕ 1.4A. ಪು. 41

ಮುಕ್ತ ಆಟ, ಮಾರ್ಗದರ್ಶಿತ ಆಟ ಹಾಗೂ ಸಂರಚಿತ ಆಟಗಳ ಈ ಮೂರು ವಿಧಗಳು ಶಿಕ್ಷಕರಿಂದ ಹೆಚ್ಚು–ಹೆಚ್ಚು ಆಯೋಜನೆ ಹಾಗೂ ನಿಯಂತ್ರಣಕ್ಕೆ ಒಳಗಾಗುವ ಹಾಗೂ ಮಕ್ಕಳ ಆಯ್ಕೆಯ ವಿಷಯವಾಗಿ ಕುಗ್ಗುತ್ತಾ ಸಾಗುವ ಹಂತಗಳನ್ನು ತೋರುತ್ತವೆ. ಬಹುಬಾರಿ, ಮಾರ್ಗದರ್ಶಿತ ಆಟದಲ್ಲಿ ಮಗು ಚಟುವಟಿಕೆಯನ್ನು ಹುಟ್ಟುಹಾಕುತ್ತದೆ (ಉದಾಹರಣೆ 1, 2 ಮತ್ತು ಸನ್ನಿವೇಶ Aನಲ್ಲಿ ಇರುವಂತೆ). ಬಳಿಕ ಶಿಕ್ಷಕರು ತಮ್ಮನ್ನು ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಪ್ರಕ್ರಿಯೆಯ ಸುಗಮಕಾರರಾಗುತ್ತಾರೆ.

ಕೋಷ್ಟಕ 2: ಆಟದ ವಿಧಗಳು

| # | ಆಟದ ವಿಧಗಳು | ಉದಾಹರಣೆಗಳು |
|---|---|---|
| 1 | ನಾಟಕೀಯ ಆಟ / ಕಾಲ್ಪನಿಕ ಆಟ | ಪುಟ್ಟದೊಂದು ಕೋಲನ್ನು ಹಿಡಿದು ಕುದುರೆಯಂತೆ ಜಿಗಿಯುತ್ತಾ, ನಾಟಕೀಯವಾಗಿ ಕಥೆಯೊಂದನ್ನು ಹೇಳುವುದು. ಕುಟುಂಬದ ಸದಸ್ಯರ, ಶಿಕ್ಷಕರ, ವೈದ್ಯರ ಪಾತ್ರಗಳನ್ನು ಹಾಕುವುದು. ಝಾನ್ಸಿ ಕಿ ರಾಣಿ, ರಾಣಿ ಚೆನ್ನಮ್ಮ, ಛೋಟಾ ಭೀಮ್, ಶಕ್ತಿಮಾನ್ ರಂತೆ ತಮ್ಮ ನೆಚ್ಚಿನ ಪಾತ್ರಗಳನ್ನು ನಾಟಕೀಯವಾಗಿ ನಿರ್ವಹಿಸುವುದು. |
| 2 | ಅನ್ವೇಷಣೆಯುಳ್ಳ ಆಟ | ಜೋಡೋ, ತೋಡೋ, ಫಿರ್ ಜೋಡೋ – ವಸ್ತುಗಳನ್ನು ಬಿಚ್ಚಿ ಮತ್ತೆ ಜೋಡಿಸುವುದು (ಉದಾ. ಟಾಯ್ಲೆಟ್ ಫ್ಲಶ್, ಗಡಿಯಾರ ಹಾಗೂ ಮಕ್ಕಳ ಮೂರು ಚಕ್ರದ ಸೈಕಲ್). ಉಪಕರಣಗಳನ್ನು ಬಳಸಿ ಪ್ರಯೋಗ ನಡೆಸುವುದು (ಉದಾ. ಅಯಸ್ಕಾಂತ, ಪಟ್ಟಕ, ಭೂತಗನ್ನಡಿ) ಕಡಲೆಕಾಳು, ಹೆಸರು ಕಾಳುಗಳಂತಹ ಬೇಳೆಗಳನ್ನು ಬೆರೆಸಿ, ವಿಂಗಡಿಸುವುದು. ಮರಳಾಟ, ನೀರಿನ ಆಟ. |
| 3 | ವಾತಾವರಣ / ಪುಟ್ಟ ಜಗತ್ತು ಆಟ | ಪ್ರಾಣಿಗಳ ಪುಟ್ಟ ಆಕೃತಿಗಳು, ಪೀಠೋಪಕರಣಗಳು, ಅಡುಗೆಮನೆಯ ಪರಿಕರಗಳು, ಹಾಗೂ ಡಾಕ್ಟರ್ ಕಿಟ್ ನಲ್ಲಿರುವ ಸಾಮಗ್ರಿಗಳೊಂದಿಗೆ ಆಡುತ್ತಾ ನೈಜ ಜಗತ್ತಿನ ಮಾದರಿಯನ್ನು ನಿರ್ಮಿಸುವುದು. ಮರ, ಗಿಡ, ಕೀಟ, ಪಕ್ಷಿ, ಪ್ರಾಣಿ, ಶಬ್ದಗಳು ಹಾಗೂ ಬಣ್ಣಗಳನ್ನು ಗುರುತಿಸಲು ಸಹಕಾರಿಯಾದ ಪರಿಸರ ನಡಿಗೆ. |
| 4 | ದೈಹಿಕ ಆಟ | ಸಂಗೀತ, ಚಲನೆ, ನಾಟಕೀಯ ವರ್ತನೆ, ಹೊರಾಂಗಣ ಆಟ, ಸಮತೋಲನ ಕಾಯ್ದುಕೊಳ್ಳುವಿಕೆ ಹಾಗೂ ಕ್ರೀಡೆಗಳ ಮೂಲಕ ದೇಹದ ಸಾಮರ್ಥ್ಯಾನ್ವೇಷಣೆ. |
| 5 | ನಿಯಮಗಳಿರುವ ಕ್ರೀಡೆಗಳು | ಕುಂಟೇ ಬಿಲ್ಲೆ (ಕಿತ್ ಕಿತ್, ಸ್ತಪು, ಲಂಗಡಿ), ಜೂಟಾಟ, ಹಾವು–ಏಣಿ, ಚೌಕಾಬಾರ, ಬುಗುರಿ, ಗೋಲಿ, ಕೋಕ್ಲಾ ಚಪ್ಪಾಕಿ, ಲಗೋರಿ, ಪಳ್ಳಂಗುಜಿ. |

ಮೂಲ: ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 1.4.2. ಆಟದ ಮೂಲಕ ಕಲಿಕೆ. ಕೋಷ್ಟಕ 1.4B. ಪು. 42

ಈ ದಾಖಲೆಯು ಯಾವ ರೀತಿಯಲ್ಲಿ ಮಕ್ಕಳು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ ಎಂಬುದರ ಆಧಾರದ ಮೇಲೆ ಆಟದ ಮತ್ತೊಂದು ವರ್ಗೀಕರಣವನ್ನು ನೀಡುತ್ತದೆ. ಈ ತೊಡಗಿಸಿಕೊಳ್ಳುವಿಕೆಯು ಪಾತ್ರಾಭಿನಯನವನ್ನು ಕಲ್ಪಿಸಿ-ಕೊಳ್ಳುವ, ವಸ್ತುಗಳನ್ನು ಕೌಶಲದಿಂದ ಬಳಸುತ್ತಾ ಅನ್ವೇಷಿಸುವ ಅಥವಾ ದೈಹಿಕವಾಗಿ ಪ್ರೇರೇಪಿತವಾಗಿ ಓಡುವ, ಜಿಗಿಯುವ, ಸಮತೋಲನ ಕಾಯ್ದುಕೊಳ್ಳುವುದೇ ಮೊದಲಾದ ರೀತಿಯದ್ದಾಗಿರಬಹುದು. ಮಗುವಿನ ಕಲಿಕೆ ಹಾಗೂ ಬೆಳವಣಿಗೆಯ ಲಕ್ಷಣಗಳನ್ನು ಸಾರಭೂತವೆಂದು ಪರಿಗಣಿಸುವ ಪಠ್ಯಕ್ರಮದ ಪಾತ್ರವು ಮಕ್ಕಳಿಗೆ ಜನರೊಡನೆ ಬೆರೆಯಲು, ರಚಿಸಲು, ಪರೀಕ್ಷಿಸಲು ಹಾಗೂ ಅಭಿವ್ಯಕ್ತಿಗೊಳಿಸಲು ಅವಕಾಶಗಳನ್ನು ನೀಡುತ್ತದೆ. ಇವೆಲ್ಲವೂ ಮಕ್ಕಳ ಸ್ವಾಭಾವಿಕ ಪ್ರವೃತ್ತಿಗಳೇ (ಡ್ಯೂಯಿ, 1990 ಪು. 43, 44) ಆಗಿದ್ದು, ಇದರಲ್ಲಿ ಬಹಳಷ್ಟು ವಿನೋದಪೂರ್ಣವಾದ ಕಲಿಕಾ-ವಾತವರಣವು ಅನುಮತಿಸುವಂತಹವೇ ಆಗಿದೆ.

ಪಠ್ಯಕ್ರಮ ಹಾಗೂ ಕಲಿಕಾ-ಮಾನದಂಡಗಳ ಆವಶ್ಯಕತೆಗಳನ್ನು ಖಾತ್ರಿಪಡಿಸುವಂತಹ ದಿನನಿತ್ಯದ ಕಾರ್ಯಕಲಾಪವನ್ನು ಸಂಯೋಜಿಸುವಾಗ ಸಮೃದ್ಧ ವಿನೋದವಾದ ಕಲಿಕಾ-ವಾತಾವರಣವು ಎಲ್ಲ ಮಕ್ಕಳಿಗೂ ದೊರೆಯುವಂತೆ ನೋಡಿಕೊಳ್ಳುವುದು ಒಂದು ಸವಾಲಾಗಿ ತೋರಬಹುದು. ವಿಶೇಷವಾಗಿ, ವಿದ್ಯಾರ್ಥಿಗಳ ಸಂಖ್ಯೆ ದೊಡ್ಡದಿರುವ ತರಗತಿಗಳಲ್ಲಿ ಹಾಗೂ ಅಸಮ ವಿದ್ಯಾರ್ಥಿ-ಶಿಕ್ಷಕರ ಅನುಪಾತವಿರುವ ನಮ್ಮ ಶಾಲೆಗಳಲ್ಲಿ ಇದೊಂದು ಸವಾಲೇ ಸರಿ. ಮಕ್ಕಳನ್ನು, ಅವರ ಹಿನ್ನೆಲೆಗಳನ್ನು ಹಾಗೂ ಅವರ ವಯೋಮಾನ ನಿಗದಿತ ಬೆಳವಣಿಗೆಯ ಪ್ರವೃತ್ತಿಗಳನ್ನು, ಸರ್ವಾಂಗೀಣ ಬೆಳವಣಿಗೆಯತ್ತ ಗಮನವೀಯುವ ಪಠ್ಯಕ್ರಮ ಧ್ಯೇಯಗಳನ್ನು, ಕಲಿಕಾ-ಮಾನದಂಡಗಳನ್ನು, ಸಮಯ ಸಂಯೋಜನೆಯ ಕಾರ್ಯತಂತ್ರಗಳನ್ನು ಹಾಗೂ ಪಠ್ಯಕ್ರಮ ಆಧಾರಿತ ಅನುಭವಗಳನ್ನು ಹೇಗೆ ಅಯೋಜಿಸಬೇಕು ಎಂಬುದನ್ನು ಶಿಕ್ಷಕರು ಅರ್ಥಮಾಡಿಳ್ಳುವುದು ಮಕ್ಕಳ ನಡುವೆ ಹಿತಕರವಾದ ಕಲಿಕೆಯನ್ನು ಸಾಧ್ಯವಾಗಿಸುತ್ತದೆ. ಪಠ್ಯವಿಷಯವನ್ನು ಸಂಪೂರ್ಣವಾಗಿ ದಾಟಿಸುವುದನ್ನು ಖಾತ್ರಿಪಡಿಸಿಕೊಳ್ಳುತ್ತಾ, ಒಂದು ವಿನೋದವಾದ ಕಲಿಕಾ-ವಾತಾವರಣವನ್ನು ಸೃಷ್ಟಿಸಿ, ಕಾಯ್ದುಕೊಳ್ಳುವುದು ಸಾಧ್ಯವೆಂದು ಹಲವು ಶಾಲಾಪೂರ್ವ ಶಿಕ್ಷಣ ಹಾಗೂ ಅಂಗನವಾಡಿ ಕಾರ್ಯಕ್ರಮಗಳು ಪ್ರದರ್ಶಿಸಿವೆ.

## ಶಿಕ್ಷಕರ ಪಾತ್ರ

ಚಿಕ್ಕ ಮಕ್ಕಳ ಶಿಕ್ಷಕರಿಗೆ ಹಲವು ರೀತಿಯ ತಯಾರಿಗಳ ಅಗತ್ಯವಿರುತ್ತದೆ. ಅವರ ಪಾತ್ರವು ಪಠ್ಯಕ್ರಮದ ಉದ್ದೇಶಗಳನ್ನು ಪೂರ್ತಿಯಾಗಿ ಸಾಧಿಸಲು ಅದರ ಕಾರ್ಯಕ್ರಮದ ನಾನಾ ಅಂಶಗಳ ಆಯೋಜನೆ, ಸಂಘಟನೆಗಳನ್ನು ಅದು ಒಳಗೊಂಡಿರುತ್ತದೆ.

1. ವಿನೋದವಾದ ಕಲಿಕೆಯಲ್ಲಿ ನಂಬಿಕೆ : ಶಿಕ್ಷಕರ ಮೊದಲ ಅಗತ್ಯವು ಮಕ್ಕಳನ್ನು ಅಂದರೆ, ಅವರ ಗುಣಲಕ್ಷಣಗಳನ್ನು ಹಾಗೂ ಪ್ರಶ್ನಿಸುವ, ವಿಚಾರಿಸುವ, ಸಂಭಾಷಣೆಯಲ್ಲಿ ತೊಡಗುವ, ಅನ್ವೇಷಿಸುವ ಹಾಗೂ ಅರ್ಥಮಾಡಿಕೊಳ್ಳುವ ಅವರ ಪ್ರವೃತ್ತಿಯನ್ನು ಹಾಗೂ ಅವರ ಕಲಿಕಾ-ಅಗತ್ಯಗಳಲ್ಲಿನ ವಿಭಿನ್ನತೆಗಳನ್ನು ಅರ್ಥಮಾಡಿ-ಕೊಳ್ಳುವುದಾಗಿರುತ್ತದೆ. ಕಲಿಕಾ-ತತ್ತ್ವಗಳೆಂತೋ ಅಂತೆಯೇ, ಸಮಗ್ರ ಕಲಿಕೆಯ ವಾತಾವರಣವನ್ನು ಕಲ್ಪಿಸುವುದರಲ್ಲಿ ಮತ್ತು ವಿನೋದವಾದ ಕಲಿಕೆಯ ಸಾಮರ್ಥ್ಯದಲ್ಲಿ ಬಲವಾದ ನಂಬಿಕೆ ಹೊಂದಿರುವುದು ಸಹ ಅಷ್ಟೇ ಮುಖ್ಯವಾಗುತ್ತದೆ. ಪೋಷಕರು ಆಟ-ಆಧಾರಿತ ಕಲಿಕೆಯ ಪ್ರಾಮುಖ್ಯವನ್ನು ಮನಗಾಣುವಂತೆ ಮಾಡುವುದೂ ಅಷ್ಟೇ ನಿರ್ಣಾಯಕವಾಗುತ್ತದೆ.

2. ಸಂಪನ್ಮೂಲವಾಗಿ ಮಕ್ಕಳು: ಮಕ್ಕಳ ವಿಚಾರಗಳು, ಮನಸ್ಥಿತಿಗಳು, ದಿನನಿತ್ಯದ ಕಲಾಪಗಳು, ಆಸಕ್ತಿಗಳು, ಪ್ರಶ್ನೆಗಳು ಹಾಗೂ ಅವರ ಉತ್ಸಾಹ ಮತ್ತು ಕುತೂಹಲಗಳು ಕೆಲವೊಮ್ಮೆ ಶಿಕ್ಷಕರು ಅವರೊಂದಿಗೆ ತೊಡಗಿಸಿಕೊಳ್ಳಲು ಅತ್ಯುತ್ಕೃಷ್ಟ ಆರಂಭಿಕ ಘಟ್ಟಗಳನ್ನು ನೀಡುತ್ತವೆ. ಮಕ್ಕಳ ದನಿಗಳು ಹಾಗೂ ಆಸಕ್ತಿಗಳನ್ನು ಸಕ್ರಿಯಾತ್ಮಕವಾಗಿ ಸಂಪನ್ಮೂಲಗಳಂತೆ ಬಳಸಿಕೊಂಡು ಅಗತ್ಯವಿರುವ ಕಲಿಕಾ-ವಾತಾವರಣವನ್ನು ನಿರ್ಮಿಸಬೇಕು.

3. ವಾತಾವರಣದ ನಿರ್ಮಾಣ: ಅಂತಹ ವಾತಾವರಣದ ನಿರ್ಮಾಣವು ಮಕ್ಕಳು ತಮ್ಮನ್ನು ತೊಡಗಿಸಿಕೊಳ್ಳುವ ಹೊರಾಂಗಣ ಮತ್ತು ಒಳಾಂಗಣದಂತಹ ಹಲವು ಆವರಣಗಳನ್ನು ಬಳಸಿಕೊಳ್ಳುವುದು ಹಾಗೂ ಸಂಯೋಜಿಸುವುದನ್ನು ಒಳಗೊಂಡಿರುತ್ತದೆ – ಅವರಿಗೆ ಆಟದ ಸಾಮಗ್ರಿ, ಉದ್ದನೆಯ ಕಪ್ಪುಹಲಗೆ, ಅವರು ತಮ್ಮನ್ನು ಅಭಿವ್ಯಕ್ತಿಸಲು, ಓದಲು, ಸಹಾಯಕಗಳನ್ನು ಬಳಸಲು ಹಾಗೂ ಮರಳು ತೊಟ್ಟಿಯಲ್ಲಿ ಬಳಸುವ ಮರಳಾಟದ ಸಾಮಗ್ರಿಗಳು ಮತ್ತು ತೆರೆದ ಆಟಿಕೆಗಳು ಗೊಂಬೆ ಮನೆ, ಇತ್ಯಾದಿಗಳಂತಹ ಅವಕಾಶಗಳನ್ನು ಕೂಡ ಕಲ್ಪಿಸಿಕೊಡುವುದನ್ನು ಮತ್ತು ಮಕ್ಕಳು ಅನುಸರಿಸಲು ಆಗುವಂತಹ ದಿನಚರಿ ಮತ್ತು ಲಯಬದ್ಧ ಗತಿಯೊಂದನ್ನು ಒಳಗೊಂಡಿರುತ್ತದೆ.

4. ವಾತಾವರಣವನ್ನು ಕಾಯ್ದುಕೊಳ್ಳುವುದು: ಆಟ-ಆಧಾರಿತ ಕಲಿಕೆಯ ಮಹತ್ತ್ವವನ್ನು ಸ್ಥಾಪಿಸಲು ಮಕ್ಕಳು, ಪೋಷಕರು ಹಾಗೂ ವಿಸ್ತೃತ ಸಮುದಾಯದಂತಹ ಸಹಭಾಗಿಗಳ ಒಂದು ಜಾಲವನ್ನು ಕಟ್ಟಿಕೊಳ್ಳುವ ಅಗತ್ಯ ಶಿಕ್ಷಕರಿಗಿರುತ್ತದೆ. ತಮ್ಮ ಬರವಣಿಗೆಯಿಂದ ನೋಟ್ ಪುಸ್ತಕಗಳನ್ನು ಭರ್ತಿಮಾಡುವಲ್ಲಿ ಕಳೆಯಲಾಗುವ ಸಮಯವನ್ನು ಸಕ್ರಿಯವಾಗಿ ಆಟದಲ್ಲಿ ಹಾಗೂ ವಿನೋದಪೂರ್ಣ ಕಲಿಕಾ-ವಾತಾವರಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಅವರಿಗೆ

ದೊರೆಯುವ ಸಮಯಕ್ಕೆ ಹೋಲಿಸಿದಾಗ ನಿರೀಕ್ಷಿಸಲಾಗುವ ಲಾಭಗಳನ್ನು ಪುನಃಪರಿಶೀಲನೆಗೆ ಒಡ್ಡುವುದನ್ನು ಇದು ಒಳಗೊಂಡಿದೆ.

ಆಟ–ಆಧಾರಿತ ಬೋಧನಶೈಲಿಯನ್ನು ಅಳವಡಿಸಿಕೊಂಡು ಈ ಹಂತವು ಮುಗಿಯುವ ಹೊತ್ತಿಗೆ ಎಲ್ಲ ಕ್ಷೇತ್ರಗಳಲ್ಲೂ ಕಲಿಕಾ–ಮಾನದಂಡಗಳ ಮಟ್ಟವನ್ನು ಹಾಗೂ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಧ್ಯೇಯಗಳನ್ನು ಸಾಧಿಸುವುದು ಸಾಧ್ಯವೆ?

ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಬೆಳವಣಿಗೆಯ ಎಲ್ಲ ಕ್ಷೇತ್ರಗಳಿಗೆ ಪ್ರಮುಖ ಪಠ್ಯಕ್ರಮ ಸಂಬಂಧಿತ ಧ್ಯೇಯಗಳು ಹಾಗೂ ಸಾಮರ್ಥ್ಯಗಳ ರೂಪುರೇಖೆಗಳನ್ನು ನೀಡುತ್ತದೆ. ಮುಂದುವರಿದು, ಬುನಾದಿ ಹಂತದ ಕೊನೆಗೆ ಸಾಧಿಸಬೇಕಿರುವ ಕಲಿಕಾ–ಮಾನದಂಡಗಳ ರೂಪುರೇಖೆಗಳನ್ನೂ ಸಹ ಅದು ನೀಡುತ್ತದೆ. ಮಕ್ಕಳು ಬುನಾದಿ ಹಂತವನ್ನು ದಾಟುವಲ್ಲಿ ಸಾಧಿಸಬೇಕಿರುವ ಬೆಳವಣಿಗೆಯ ಅಂಶಗಳ ವ್ಯಾಪ್ತಿಯನ್ನು ಅದು ನೀಡುತ್ತದೆ.

ಮಕ್ಕಳು ಮೌಖಿಕವಾಗಿ ಮಾತನಾಡುವುದರಿಂದ ಹಿಡಿದು, ಓದುವ ಹಾಗೂ ಬರೆಯುವ ಮತ್ತು ಔಪಚಾರಿಕ ಅಕ್ಷರಜ್ಞಾನವು ಮಕ್ಕಳಲ್ಲಿ ಮೊಳೆಯುವತ್ತ ಸಾಗುವ ಪ್ರಗತಿಪಥವೊಂದನ್ನು ಭಾಷೆ ಮತ್ತು ಸಾಕ್ಷರತೆಯ ಕಲಿಕಾ–ಮಾನದಂಡಗಳು ಮುಂಗಾಣುತ್ತವೆ. ಇದೇ ರೀತಿ, ಪ್ರಾರಂಭಿಕ ಗಣಿತದ ಮಾನದಂಡಗಳು ಪ್ರಾರಂಭಿಕ ಹಾಗೂ ಮೊಳಕೆಯೊಡೆಯುವ ಗಣಿತದ ಪರಿಕಲ್ಪನೆಗಳೆಲ್ಲಕ್ಕೂ ಒಂದು ಬೆಳವಣಿಗೆಯ ವ್ಯಾಪ್ತಿಯನ್ನು ಮುಂಗಾಣುತ್ತವೆ. ಇದನ್ನು, ಮಗುವು ಎಂಟನೇ ವಯಸ್ಸನ್ನು ತಲುಪುವ ವೇಳೆಗೆ, ಸಂಖ್ಯಾಜ್ಞಾನ ಹಾಗೂ ಮೂಲಭೂತ ಅಂಕಗಣಿತ ಮತ್ತು ಜ್ಯಾಮಿತಿ ಜ್ಞಾನಗಳು ಅನುಸರಿಸುತ್ತವೆ.

ಅಂತಿಮವಾಗಿ, ವ್ಯವಸ್ಥಿತ ಬೋಧನೆ ಮತ್ತು ಆಟ ಆಧಾರಿತ ಬೋಧನಾವಕಾಶಗಳಿಗೆ ನಿಗದಿಪಡಿಸುವ ಕಾಲಾವಕಾಶ ಮತ್ತು ಸಮತೋಲನಗಳ ವಿಚಾರವಾಗಿ ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸ್ಪಷ್ಟವಾಗಿ ಹೀಗೆಂದು ಹೇಳುತ್ತದೆ:

> ಈ ಹಂತದಲ್ಲಿ ವಿಸ್ತೃತ ವ್ಯಾಪ್ತಿಯ ಚಟುವಟಿಕೆಗಳು ಹಾಗೂ ಪ್ರೇರೇಪಣಾಪೂರ್ಣ ಅನುಭವಗಳನ್ನು ಒಳಗೊಂಡಿರುವ ಆಟಗಳ ಮೂಲಕ ಮಕ್ಕಳು ಕಲಿಯುತ್ತಾರೆ. ಇವುಗಳಲ್ಲಿ ಪಾಲ್ಗೊಳ್ಳುವಾಗ ಭಾವ–ನಾತ್ಮಕವಾಗಿ ಹಾಗೂ ಮಾನಸಿಕವಾಗಿ ಅವುಗಳಿಂದ ಕಲಿಯಲು ಮಕ್ಕಳು ಪ್ರೇರೇಪಿತರಾಗುವ ರೀತಿಯಲ್ಲಿ ಈ ಎಲ್ಲ ಚಟುವಟಿಕೆಗಳು, ಅನುಭವಗಳು ಸಂಯೋಜನೆ–ಗೊಳ್ಳುವ ಅಗತ್ಯವಿದೆ. ಆಟದ ಈ ವಿಸ್ತಾರವಾದ ಕಲ್ಪನೆಯ ಅಡಿಯಲ್ಲಿ ಮಕ್ಕಳು ಗಮನಿಸುವ, ಮಾಡುವ, ಆಲಿಸುವ, ಓದುವ, ಮಾತನಾಡುವ, ಬರೆಯುವ, ಯೋಚಿಸುವ ಹಾಗೂ ಅಭ್ಯಾಸಮಾಡುವ ಮೂಲಕ ಸಹ ಕಲಿಯುತ್ತಾರೆ ಎಂಬುದನ್ನು ಗಮನದಲ್ಲಿಡಬೇಕು. ಮಕ್ಕಳು ಹೊಸ ಪರಿಕಲ್ಪನೆಗಳನ್ನು ಕಲಿಯುತ್ತಾರೆ, ಅವುಗಳನ್ನು ವ್ಯಾಖ್ಯಾನಿಸುತ್ತಾರೆ ಹಾಗೂ ತಮ್ಮಲ್ಲಿರುವ ಜ್ಞಾನವನ್ನು ಹೊಸದಾಗಿ ಪರಿಚಯಿಸಲ್ಪಟ್ಟ ಜ್ಞಾನದೊಂದಿಗೆ ಬೆಸೆಯುತ್ತಾರೆ. ಮಕ್ಕಳು, ವಿಶೇಷವಾಗಿ, ಸಾಕ್ಷರತೆ ಮತ್ತು ಗಣಿತದ ಕಲಿಕೆಯಲ್ಲಿ ತೊಡಗುವಾಗ ಸ್ಪಷ್ಟರೂಪದ ವ್ಯವಸ್ಥಿತ ಬೋಧನೆ, ಕೊಂಚ ಅಭ್ಯಾಸ ಮತ್ತು ಪರಿಶ್ರಮಗಳು ಅಗತ್ಯವಾಗುತ್ತವೆ. ಆದಾಗ್ಯೂ, ಮಕ್ಕಳು ಮೋಜು ಮತ್ತು ಆಟದಂತಹ ಬಲಿಷ್ಠ ಅಂಶಗಳೊಂದಿಗೆ ಸಕಾರಾತ್ಮಕವಾಗಿ ತೊಡಗಿಸಿಕೊಳ್ಳುವ ಮೂಲಭೂತ ಅಗತ್ಯಕ್ಕೆ ಈ ಎಲ್ಲವೂ ಬದ್ಧವಾಗಿರಬೇಕಾಗುತ್ತದೆ.

**ಪರಾಮರ್ಶನ:**


Dewey, J. (1990/1900). The School and Society. Chicago, IL: University of Chicago Press

National Curriculum Framework for the Foundational Stage. National Council of Educational Research and Training (NCERT). 2022





**ಕಿನ್ನರಿ ಪಾಂಡ್ಯ** ಅವರು ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಲ್ಲಿ ಮಗುವಿನ ಬೆಳವಣಿಗೆ, ಆರಂಭಿಕ ಬಾಲ್ಯದ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣಕ್ಕೆ ಸಂಬಂಧಿಸಿದ ವ್ಯಾಸಂಗ ವಿಷಯಗಳನ್ನು ಬೋಧಿಸುತ್ತಾರೆ. ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯು ಶಿಕ್ಷಣ ಕ್ಷೇತ್ರದ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ವಿಶೇಷವಾಗಿ ನೀಡುವ ವಿಷಯಗಳ ಮೂಲಕ "ಆರಂಭಿಕ ಬಾಲ್ಯದ ಶಿಕ್ಷಣ"ವನ್ನು ಪರಿಕಲ್ಪಿಸಿಕೊಳ್ಳುವ ಹಾಗೂ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಫೌಂಡೇಷನ್‌ನ ತೆಲಂಗಾಣ, ಕರ್ನಾಟಕ, ಪುದುಚೇರಿ ಮತ್ತು ಮಧ್ಯಪ್ರದೇಶಗಳ ಕ್ಷೇತ್ರ ಉಪಕ್ರಮಗಳಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. 2006ರಿಂದಲೂ ಇವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಹಲವು ಉಪಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇವರು ಟೀಚಿಂಗ್ ದ ಯಂಗ್: ದ ಅರ್ಲಿ ಚೈಲ್ಡ್ ಹುಡ್ ಪ್ರೊಫೆಷನ್ ಇನ್ ಇಂಡಿಯ ಎಂಬ ನಿಯತಕಾಲಿಕದ ಸಹ–ಸಂಪಾದಕರಾಗಿದ್ದಾರೆ. ಇವರನ್ನು kinnari@apu.edu.in ಮೂಲಕ ಸಂಪರ್ಕಿಸಬಹುದು.



ಅನುವಾದ: **ಕುಶಾಲ್ ಬಿ. ಎಸ್.** | ಪರಿಶೀಲನೆ: **ಲತಾ ಕೆ. ಸಿ.**

ಲವಲವಿಕೆಯಿಂದ ತುಂಬಿದ ಹಳ್ಳಿಯೊಂದರಲ್ಲಿ ಅಂಗನವಾಡಿಯ ಹತ್ತಿರ ಬೇರೆ ಬೇರೆ ರೂಪದ ಆಟಗಳಲ್ಲಿ ಉಲ್ಲಾಸ ಭರಿತರಾಗಿ ತೊಡಗಿಸಿಕೊಂಡ ಮಕ್ಕಳ ಗುಂಪುಗಳೊಂದಿಗೆ ಒಂದು ಸಂಜೆಯು ಅನಾವರಣಗೊಳ್ಳುತ್ತದೆ ಶಿಕ್ಷಕರು ಅವರ ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಗಮನಿಸಿ ಸಂತೋಷ ಪಡುತ್ತಾರೆ ಪ್ಲಾಸ್ಟಿಕ್‌ಲೋಟಗಳಂತಹ ವಸ್ತುಗಳ ಜೊತೆ ಬೇರೆ ಬೇರೆ ರೀತಿಗಳ ಆಟಗಳು ಮಣ್ಣಿನಿಂದ ಬೇರೆ ಬೇರೆ ಆಕೃತಿಗಳನ್ನು ಮಾಡಿ ಆಡುವ ಸಾಂಕೇತಿಕ ಆಟ ಲಗೋರಿಯಂತಹ ನಿಯಮಬದ್ಧ ಆಟಗಳು; ಮಕ್ಕಳ ಗುಂಪೊಂದು "ಗಣಪತಿ ಮೆರವಣಿಗೆ" ಹೊರಡುವಂತೆ ಆಡುತ್ತಿರುವ ಸಮಾಜೋ–ನಾಟಕೀಯ ಆಟ ಅಲ್ಲದೆ ಕುಪ್ಪಳಿಸುವುದು ನೆಗೆಯುವುದು ಮತ್ತು ಓಡುವಂತಹ ದೈಹಿಕ ಆಟ – ಇವೆಲ್ಲವೂ ನಿಶ್ಚಿತವಾಗಿಯೂ ಮಕ್ಕಳ ಕಲ್ಪನಾ ಶಕ್ತಿಯ ಸಮೃದ್ಧತೆ ಮತ್ತು ಸ್ಥಳೀಯ ಸಂಪ್ರದಾಯಗಳೊಡನೆ ಅವರ ಸಂಬಂಧಗಳನ್ನು ಪ್ರದರ್ಶಿಸುತ್ತವೆ ಈ ಸನ್ನಿವೇಶವು ಚಮತ್ಕಾರಿಕವಾದುದು ಜಾದೂಯಿ).

ಉಮಾಮಹೇಶ್ವರ ರಾವ್ ಜಗ್ಗೇನ, ಜಾದೂಯಿ ಪಿಟಾರಾ। ಆರಂಭಿಕ ಬಾಲ್ಯದಲ್ಲಿ ಆಟದ ಚಮತ್ಕಾರ